ಗುಲ್ಬರ್ಗಾ ಜಿಲ್ಲೆಯಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ರೈತರಿಗಾದ ನಷ್ಟದ ಬಗ್ಗೆ

೫೦೦. ಶ್ರಿಎಂ. ಎಂ. ಗುತ್ತೇದಾರ್ (ಅಫಜಲಪುರ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ರೈತರು ಹೊಲಗಳಲ್ಲಿ ಬಿತ್ತಿರುವ ಬೀಜಗಳು ಹಾಗೂ ಕೆಲವೆಡೆ ಅಲ್ಪಸ್ವಲ್ಪ ಬಂದಿದ್ದ ಬೆಳೆಗಳು ಸಂಪೂರ್ಣ ನಾಶವಾಗಿ ರೈತರಿಗೆ ತೀವ್ರ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವ್ಯವಸಾಯಕ್ಕಾಗಿ ರೈತರು ಬ್ಯಾಂಕಿನಿಂದ ಸಾಲ ಪಡೆದ ಬೀಜವನ್ನು ಬಿತ್ತಿದ್ದು ಈಗ ಅವರಿಗಾದ ನಷ್ಟಕ್ಕೆ ಸರ್ಕಾರವು ಕೈಗೊಂಡ ಕ್ರಮವೇನು? ಬ್ಯಾಂಕಿನ ಸಾಲವನ್ನು ಮರುಪಾವತಿ ಮಾಡುವ ಕ್ರಮ ಯಾವುದು? ಈ ಬಗ್ಗೆ ಪರಿಹಾರವಾಗಿ ಸಹಾಯಧನ ಅಥವಾ ಬ್ಯಾಂಕಿನ ಸಾಲಕ್ಕೆ ಬಡ್ಡಿಯನ್ನು ಮನ್ನಾ ಮಾಡುವುದೇ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಬಂದಿದೆ.

ಆ) ಬೆಳೆ ಹಾನಿ ಉಂಟಾಗಿ ನಷ್ಟ ಹೊಂದಿದ ಸಂತ್ರಸ್ತರಿಗೆ ಪರ್ಯಾಯ ಬೆಳೆ ಬೆಳೆಯಲು ಬೀಜ ಗೊಬ್ಬರಗಳುಳ್ಳ ಕೃಷಿ ಚೀಲಗಳನ್ನು ಉಚಿತವಾಗಿ ನೀಡುವ ಅವಕಾಶವಿರುತ್ತದೆ. ಹಾಗೆಯೇ ಸಹಕಾರಿ ಸಂಘಗಳಿಂದ ಪಡೆದ ಕೃಷಿ ಸಾಲಗಳನ್ನು ಅಲ್ಪಾವಧಿಯಿಂದ ದೀರ್ಘಾವಧಿ ಸಾಲವಾಗಿ ಪರಿವರ್ತಿಸಲು ಅವಕಾಶವಿದೆ. ರೂ ೮೦೦-೦೦ಕ್ಕಿಂತ ಹೆಚ್ಚಿರದಂತೆ ಬ್ಯಾಂಕುಗಳಿಂದ ಪಡೆದ ಸಾಲಗಳಿಗೆ ೨ ವರ್ಷಗಳವರೆಗೆ ಬಡ್ಡಿ ಪರಿಹಾರದ ಅವಕಾಶವಿರುತ್ತದೆ. ಈ ರೀತಿ ಪರಿಹಾರ ಕಾರ್ಯಕ್ರಮದಡಿ ನಷ್ಟ ಹೊಂದಿದವರು ಪರಿಹಾರ ಪಡೆಯಬಹುದು.

ಹುಕ್ಕೇರಿ ತಾಲ್ಲೂಕು ಬೀರನೋಳಿ ಗ್ರಾಮದ ಬೇಡ ಮಹಿಳೆಯರ ಮೇಲೆ ಪೋಲೀಸರ ದೌರ್ಜನ್ಯದ ಬಗ್ಗೆ

೪೦೮೦. ಮಾಲೀಕಯ್ಯ ವಿ. ಗುತ್ತೇದಾರ್‌ರವರ (ಅಫಜಲ್‌ಪುರ).— ಬೀರನೋಳಿ ಬಡ ಮಹಿಳೆಯರ ಮೇಲೆ ಪೋಲೀಸರ ದೌರ್ಜನ್ಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಕ್ಕೇರಿ ತಾಲ್ಲೂಕಿನ ಬೀರನೋಳಿ ಗ್ರಾಮದ ಬೇಡರ ಜಾತಿಗೆ ಸೇರಿದ ೨೫-೩೦ ಬಡ ಮಹಿಳೆಯರ ಮೇಲೆ ನೂರಾರು ಪೋಲೀಸರು ಹಠಾತ್ತನೆ ಹಲ್ಲೆ ನಡೆಸಿ, ಬೆತ್ತಲೆ ಪೆರವಣಿಗೆ ನಡೆಸಿರುವುದು ಗಮನಕ್ಕೆ ಬಂದಿದೆಯೇ?

ಆ) ಅದರ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ. ಈ ಘಟನೆಗೆ ಪೋಲೀಸ್ ಇಲಾಖೆಗೆ ಸರ್ಕಾರದವರು ಶಾಮೀಲಾಗಿ ಪ್ರೋತ್ಸಾಹಿಸುತ್ತಿರುವುದು ನಿಜವೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಇದು ಸತ್ಯಕ್ಕೆ ದೂರವಾಗಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಮುಚ್ಚಲ್ಪಟ್ಟ ಕಾರ್ಖಾನೆಗಳ ಬಗ್ಗೆ ಮತ್ತು ಅದರ ಕಾರ್ಮಿಕರಿಗಾಗಿರುವ ಅನ್ಯಾಯದ ಬಗ್ಗೆ

೫೦೦೭. ಶ್ರೀ ವಿ. ಗುತ್ತೇದಾರ್ (ಅಫಜಲಪುರ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇದುವರೆಗೆ ಮುಚ್ಚಲ್ಪಟ್ಟ ಕಾರ್ಖಾನೆಗಳ ಒಟ್ಟು ಸಂಖ್ಯೆ ಎಷ್ಟು? ಅದರಲ್ಲಿ ದುಡಿಯುತ್ತಿರುವ ಕಾರ್ಮಿಕರ ಗತಿ ಏನಾಗಿದೆ. ಅವರ ಜೀವನಕ್ಕೆ ಏನು ರಕ್ಷಣೆ ನೀಡಲಾಗಿದೆ